ದಿನಾಂಕ 15.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ-ಶ್ರೀ.ಸಿ.ಎಲ್.ಎಸ್.ವಕೀಲರಿಂದಃ-</u>**

ನನ್ನ ಅಜ್ಜನ ಹೆಸರು ವೆಂಕಟಪ್ಪ ಅಲಿಯಾಸ್ ಶಿವಪ್ಪ. ನನ್ನ ಅಜ್ಜನಿಗೆ ಸೀತಮ್ಮ ಮತ್ತು ಚೆಲುವಯ್ಯ ಎಂಬ ಇಬ್ಬರು ಮಕ್ಕಳು. ಚೆಲುವಯ್ಯ ನನ್ನ ತಂದೆ. ಸೀತಮ್ಮ ನನ್ನ ತಂದೆಯ ಅಕ್ಕ. ನನ್ನ ತಂದೆಗೆ ನನ್ನನ್ನು ಹೊರತುಪಡಿಸಿ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಅಂದಾಜು 1992 ರಲ್ಲಿ ನನ್ನ ತಂದೆ ಮೃತರಾಗಿರುತ್ತಾರೆ. ಆಗ ನಾನು 11 ತಿಂಗಳ ಮಗುವಾಗಿದ್ದೆ. ನನ್ನ ತಂದೆಯು ಮೃತರಾದ ಬಳಿಕ ಕುಟುಂಬದ ಎಲ್ಲಾ ವ್ಯವಹಾರವನ್ನು ನನ್ನ ತಾಯಿಯು ನೋಡಿಕೊಳ್ಳುತ್ತಿದ್ದರು. ನನ್ನ ತಾಯಿಯು ಕುಟುಂಬದ ಸ್ವತ್ತುಗಳಲ್ಲಿ ಬರುತ್ತಿದ್ದ ಆದಾಯದಿಂದ ನಮ್ಮನ್ನು ಸಾಕಿರುತ್ತಾರೆ. ನನ್ನ ತಂದೆಯ ಆಸ್ತಿಗಳನ್ನು ಹೊರತುಪಡಿಸಿ ನನ್ನ ತಾಯಿಯ ಹೆಸರಿನಲ್ಲಿ ಬೇರೆ ಆಸ್ತಿಗಳು ಇರುವುದಿಲ್ಲ.

ದಾವಾ ಸ್ವತ್ತುಗಳ ಸರ್ವೆ ನಂಬರುಗಳು ಮತ್ತು ಅವುಗಳ ವಿಸ್ತೀರ್ಣವನ್ನು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ದಾವಾ ಸ್ವತ್ತುಗಳ ಪಹಣಿಗಳು ನನ್ನ ತಾಯಿಯ ಹೆಸರಿನಲ್ಲಿ ಇವೆ. ನಾನು ಅಂಚೆ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೇನು. ವಾದಿಯ ಹಿಸ್ಸೆಗೆ 1.50 ಎಕರೆ ಜಮೀನನ್ನು ನೀಡಲಾಗಿದೆ ಎಂದು ಹೇಳುವ ಸಂದರ್ಭದಲ್ಲಿ ನನಗೆ 12 ವರ್ಷ ವಯಸ್ಸಾಗಿತ್ತು. ದಿಃ 10.11.2004 ರಂದು ವಾದಿಯು ನೊಂದಾಯಿತ ಕ್ರಯಪತ್ರದ ಮೂಲಕ ನಮ್ಮ ಕುಟುಂಬಸ್ಥರಿಂದ 1.50 ಎಕರೆ ಜಮೀನನ್ನು ಖರೀದಿಸಿರುತ್ತಾರೆ

ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ವಾದಿಗೆ 1.50 ಎಕರೆ ಜಮೀನನ್ನು ಭಾಗಂಶದ ರೂಪದಲ್ಲಿ ನೀಡಲಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಕ್ರಯಪತ್ರದ ಸಂದರ್ಭದಲ್ಲಿ ನಾನು ಅಪ್ರಾಪ್ತ ವಯಸ್ಕನಾಗಿದುದ್ದರಿಂದ ನನಗೆ ಕ್ರಯಪತ್ರದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ವಾದಿಯು ರೂ. 2,42,000/- ಗಳನ್ನು ನೀಡಿ ಸರ್ವೆ ನಂ. 98/1 ರಲ್ಲಿ 1 ಎಕರೆ 33 ಸೆಂಟ್ಸ್, ಸರ್ವೆ ನಂ. 100/3 ರಲ್ಲಿ 9.50 ಸೆಂಟ್ಸ್ ಜಾಗವನ್ನು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳನ್ನು ವಾದಿಯು ಕ್ರಯಪತ್ರದ ಮೂಲಕ ಖರೀದಿಸಿದ ಸ್ವತ್ತುಗಳಾಗಿವೆ ಹೊರತು ಭಾಗಂಶದ ರೂಪದಲ್ಲಿ ಪಡೆದ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ನನ್ನ ತಾಯಿಯ ಹೆಸರಿನಲ್ಲಿ ಎಷ್ಟು ಆಸ್ತಿ ಇದೆ ಎಂಬುದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ. ಸರ್ವೆ ನಂ. 97/2 ವಿಸ್ತೀರ್ಣ 11.38 ಎಕರೆ ಗದ್ದೆ ಜಮೀನು ನನ್ನ ತಾಯಿ ಮತ್ತು ಇತರೆ ಕುಟುಂಬದವರ ಹೆಸರಿನಲ್ಲಿ ಇದೆ. ಸದರಿ ಸ್ವತ್ತು ಪಾಳು ಬಿದ್ದಿದೆ. ಸರ್ವೆ ನಂ. 97/2 ನನ್ನ ಅಜ್ಜನಿಗೆ ಸೇರಿರುವಂತಹದ್ದಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಶಾನೆ ಡಿ. 1 ಮತ್ತು 2 ರಲ್ಲಿ ನಮೂದಿಸಿರುವ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೂ ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಪ್ಯಾರಾ 5 ರಲ್ಲಿ ನಮೂದಿಸಿರುವ ವ್ಯಕ್ತಿಗಳಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿರುವ ಕಾಫಿ ಫಸಲನ್ನು ನಾವೇ ತೆಗೆದುಕೊಳ್ಳುತ್ತಿದ್ದೇವೆ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ)

ಸಹಿ
ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.